ಹಾಕಿ ಜೊತೆಗೆ ನಾಲ್ಕು ನಾಲ್ಕು ಕೋಡುಬಳೆಯನ್ನು ತಟ್ಟೆಗೆ ಹಾಕಿ, ಎಲ್ಲ ಮಕ್ಕಳಿಗೂ ತಂದುಕೊಟ್ಟಳು. ಮಕ್ಕಳು ಖುಷಿ ಖುಷಿಯಾಗಿ ಕೇಸರಿಬಾತನ್ನು ತಿನ್ನತೊಡಗಿದರು. ತಮ್ಮ ತಟ್ಟೆಗೆ ಹಾಕಿದ್ದನ್ನು ತಿಂದು ಮುಗಿಸಿ ಮತ್ತಷ್ಟು ಬೇಕು ಅಂತ ಬೇಡಿಕೆ ಇಟ್ಟರು. ಈ ಮಕ್ಕಳು ಇನ್ನು ಯಾರಿಗೂ ತಿನ್ನಲೂ ಉಳಿಸುವುದಿಲ್ಲ ಅಂದುಕೊಂಡು ಅಡುಗೆ ಮನೆಗೆ ಬಂದು ಒಂದಿಷ್ಟು ತೆಗೆದಿರಿಸಿ, ಇಡೀ ಪಾತ್ರೆಯನ್ನೇ ಹೊರಗೆ ತಂದು ಎಲ್ಲರಿಗೂ ಹಾಕಿ ಖಾಲಿ ಮಾಡಿದಳು. ಮಕ್ಕಳು ಆನಂದವಾಗಿ ತಿನ್ನುವುದನ್ನು ನೋಡುತ್ತಾ ದೇವರೇ ಈ ಆನಂದ ಸದಾ ಉಳಿಯುವಂತೆ ನೋಡಿಕೊಳ್ಳಪ್ಪ ಎಂದು ಬೇಡಿಕೊಂಡಳು.

ತಿಂಡಿ ತಿನ್ನುತ್ತಿದ್ದ ಭಾಮ 'ದೊಡ್ಡಮ್ಮ ಕೇಸರಿಬಾತ್ ತುಂಬಾ ಚೆನ್ನಾಗೈತೆ, ಪಾಪ ವೀರೂ ಸುಮ್ನೆ ಅಮ್ಮನತ್ರ ಬರೆ ಆಕ್ಸಂಡ, ಅಲ್ಲ ದೊಡ್ಡಮ್ಮ, ಅಮ್ಮ ಯಾಕೆ ವೀರೂಗೆ ಬೈಯ್ತಾರೆ, ಅವ್ನಿಗೆ ನಮ್ಮ ಥರಾ ಹುಡುಗಿ ಬಟ್ಟೆ ಹಾಕ್ಕೋಳಾಕೆ ಇಷ್ಟ, ಅದ್ರಾಗೆ ತಪ್ಪು ಏನೈತೆ ದೊಡ್ಡಮ್ಮ. ನಾವೂ ಗಂಡ್ಮಕ್ಕ ಬಟ್ಟೆ ಹಾಕಳಾಕಿಲ್ವಾ, ನಮಗೆ ಅಮ್ಮನೇ ಪ್ಯಾಂಟು, ಶರ್ಟು ತೆಕ್ಕೊಡ್ತರೇ, ನಾವು ಪ್ಯಾಂಟ್ ಶರ್ಟು ಹಾಕ್ಕೊಂಡ್ರೆ ಅಮ್ಮ ಏನೂ ಅನ್ನೋದಿಲ್ಲ. ವೀರೇಶ ಹುಡುಗಿ ಬಟ್ಟೆ ಹಾಕ್ಕೊಂಡ್ರೆ ಮಾತ್ರ ಅಮ್ಮ ಸಿಕ್ಕಾಪಟ್ಟೆ ಬೈಯ್ತಾರೆ. ಪಾಪ ಇವತ್ತು ಬರೇನೆ ಹಾಕಿಬಿಟ್ರು' ಎಂದು ಅಮ್ಮ ವೀರು ಬಗ್ಗೆ ಕೋಪ ಮಾಡಿಕೊಳ್ಳುತ್ತಿರುವುದು ಅರ್ಥವಾಗದೆ ತನ್ನ ಸಂಶಯ ನಿವಾರಿಸಿಕೊಳ್ಳಲು ದೊಡ್ಡಮ್ಮನನ್ನು ಕೇಳಿದಳು.

ಶಾಂಭವಿಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಮಕ್ಕಳಿಗೆ ಇದೆಲ್ಲ ಅರ್ಥ ಮಾಡಿಸುವುದಾದರೂ ಹೇಗೆ? ಮೊದಲಿಗೆ ಅವಳಿಗೆ ವಾರಿಜಾಳ ವರ್ತನೆ ಅರ್ಥವಾಗಿರಲಿಲ್ಲ. ಇನ್ನು ಈ ಮಕ್ಕಳಿಗೆ ಏನೂ ಹೇಳಿಯಾಳು. ವಾರಿಜಾ ಯಾಕೆ ಈ ಪುಟ್ಟ ಮಗುವಿನ ಮೇಲೆ ಹಾಗೆ ಆಡುತ್ತಾಳೆ. ಏನೋ ಮಗು ಆಸೆ ಪಟ್ಟು ಹುಡುಗಿಯ ಬಟ್ಟೆ ಹಾಕಿರಬಹುದು. ಅದು ಅವಳಿಗೆ ಇಷ್ಟ ಇಲ್ಲ ಅಂದ್ರೆ ನಿಧಾನವಾಗಿ ತಿಳಿಸಿ ಹೇಳಿದರೆ ಆಯ್ತಪ್ಪ, ಅದಕ್ಯಾಕೆ ಮಗುನಾ ಹೊಡ್ದು ಬಡ್ದು ಮಾಡಬೇಕು. ಇವತ್ತಂತೂ ಎಳೆ ಚರ್ಮ ಅಂತನೂ ನೋಡ್ದೆ ಬರೆ ಆಕಿದ್ದಾಳೆ. ಕಟುಕಿ, ಅಪರೂಪದ ಮಗನ್ನ ಇಂಗಾ ನೋಡ್ಕೊಳ್ಳೋದು. ಭಾಮನಿಗೆ ಏನು ಉತ್ತರಿಸುವುದು ಅಂತ ಅವಳತ್ತ ನೋಡಿದರೆ ಅವಳು ತಾನು ಕೇಳಿದ ಪ್ರಶ್ನೆ ಮರೆತು ಅಕ್ಕಂದಿರೊಂದಿಗೆ ಕೇಸರಿಬಾತನ್ನು ಕಿತ್ತು ತಿನ್ನುವುದರಲ್ಲಿ ಮಗ್ನಳಾಗಿದ್ದಳು. ಈ ಘಟನೆ ನಡೆದ ಮೇಲೆ ಒಂದಷ್ಟು ದಿನಗಳು ಮನೆ ಸಹಜವಾಗಿ ನಡೆದುಹೋಗುತ್ತಿತ್ತು. ಅಂತಹ ಸಂದರ್ಭದಲ್ಲಿಯೇ ಊರಿನಲ್ಲಿ ನಡೆದ ಗಜಾನನ ಸಾವು ಎಲ್ಲರಲ್ಲೂ ದಿಗ್ಭ್ರಮೆ ಹುಟ್ಟಿಸಿತ್ತು.

ಊರಲ್ಲಿ ಗಜಾನನ ನೇಣು ಹಾಕಿಕೊಂಡು ಸತ್ತನೆಂದು, ಮನೆಯಲ್ಲಿ ಅದೇನೊ ಗಲಾಟೆ ಅಂತ ಊರಲ್ಲಿ ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು. ಗಜಾನನ ನಾಟಕಗಳಲ್ಲಿ ಪಾತ್ರ ಮಾಡುವವನು. ಅದರಲ್ಲೂ ಹೆಣ್ಣು ಪಾತ್ರ ಮಾಡುವಲ್ಲಿ ಎತ್ತಿದ ಕೈ. ಪಾತ್ರ ಮಾಡಲು ಊರಿಂದ ಊರಿಗೆ ಹೋಗುತ್ತಿದ್ದ. ಸಂಪಾದನೆಯೂ ಚೆನ್ನಾಗಿಯೇ ಇತ್ತು. ಅವನು ಹೆಣ್ಣು ವೇಷ ಹಾಕಿದ್ದರೆ ಯಾರಿಗೂ ಅವನನ್ನು ಪತ್ತೆ ಮಾಡಲು ಆಗುತ್ತಿರಲಿಲ್ಲ. ಥೇಟ್ ಹೆಣ್ಣಿನಂತೆಯೇ ಕಾಣುತ್ತಿದ್ದ. ಹೆಣ್ಣಿನದೇ ಹಾವಭಾವ, ಅಲಂಕಾರ, ಧ್ವನಿ ಬದಲಿಸಿ ಹೆಣ್ಣಿನಂತೆಯೇ ಮಾತನಾಡುತ್ತಿದ್ದ. ನಟನೆಯೂ ಉತ್ತಮವಾಗಿಯೇ ಮಾಡುತ್ತಿದ್ದ. ಹಾಗಾಗಿ ಪೌರಾಣಿಕವಿರಲಿ, ಸಾಮಾಜಿಕವಿರಲಿ, ಐತಿಹಾಸಿಕವಿರಲಿ, ಮನಮುಟ್ಟುವಂತೆ ಅಭಿನಯಿಸಿ ಜನರನ್ನು ಗೆದ್ದು ಬಿಡುತ್ತಿದ್ದ. ಎಲ್ಲ ನಾಟಕಕ್ಕೂ ಅವನೇ ನಾಯಕಿಯಾಗಿ ಇರಬೇಕೆಂದು ಜನ ಬಯಸುತ್ತಿದ್ದರು. ಅವನು ಕೇಳಿದಷ್ಟು ಸಂಭಾವನೆ ನೀಡಿ ಕರೆದೊಯ್ಯುತ್ತಿದ್ದರು. ವರ್ಷವಿಡೀ ಅವನಿಗೆ ಕೈ ತುಂಬಾ ಕೆಲಸ.

ಮನೆಯಲ್ಲಿ ಅಪ್ಪ–ಮಗ ಇಬ್ಬರೇ. ಅಮ್ಮ ಚಿಕ್ಕ ವಯಸ್ಸಿನಲ್ಲಿಯೇ ಕಣ್ಣು ಮುಚ್ಚಿದ್ದರು. ದುಡಿದು ಇದ್ದ ಅಕ್ಕ ತಂಗಿಯರ ಮದುವೆಯನ್ನು ಮಾಡಿದ್ದ. ಸಾಕಷ್ಟು ಕೈ ಬಿಚ್ಚಿಯೇ ಖರ್ಚು ಮಾಡಿ ತಾನೇ ನಿಂತು ಒಳ್ಳೆಯ ಕಡೆ ಹುಡುಕಿ ಮದುವೆ ಮಾಡಿದ್ದ. ಹಳೇ ಮನೆ ಕೆಡವಿ ಸೊಗಸಾದ ಸುಂದರ ಮನೆಯನ್ನು ಕಟ್ಟಿ ಊರವರ ಬಳಿ ಸೈ ಎನಿಸಿಕೊಂಡಿದ್ದ. ಇನ್ನೊಂದೇ ಉಳಿದಿದ್ದು, ಅವನ ಮದುವೆ. ಯಾಕೋ ಗಜಾನನ ಮದುವೆ ಬಗ್ಗೆ ಆಸಕ್ತಿಯೇ ತೋರುತ್ತಿರಲಿಲ್ಲ. ಅಪ್ಪ, ಅಕ್ಕ ತಂಗಿಯರು, ಊರವರು, ಆತ್ಮೀಯರು, ಗೆಳೆಯರು ಯಾರೆಷ್ಟೇ ಹೇಳಿದರೂ ಮದುವೆ ಬಗ್ಗೆ ಉದಾಸೀನ ತೋರುತ್ತಿದ್ದ. ಅವನ ಅಪ್ಪ ದೇವಣ್ಣನಿಗೆ ಅದೇ ಚಿಂತೆಯಾಗಿ ಬಿಟ್ಟಿತ್ತು. ಆಷಾಢದಲ್ಲಿ ನಾಟಕಗಳಿರುವುದಿಲ್ಲ. ಹಾಗಾಗಿ ಆ ಒಂದು ತಿಂಗಳು ಮನೆಯಲ್ಲಿಯೇ ಗಜಾನನ ಇರುತ್ತಿದ್ದ. ಈ ಬಾರಿಯಾದರೂ ಮಗನನ್ನು ಮದುವೆಗೆ ಒಪ್ಪಿಸಲೇಬೇಕೆಂದು ದೇವಣ್ಣ ತೀರ್ಮಾನ ಮಾಡಿಬಿಟ್ಟಿದ್ದ. ಹಾಗಾಗಿ ಮಗ ಮನೆಗೆ ಬಂದ ದಿನದಿಂದ ಮದುವೆಯಾಗೆಂದು ಬಲವಂತಿಸುತ್ತಿದ್ದ. ಆದರೆ ಗಜಾನನ, 'ಅಲ್ಲಪ್ಪ, ನಾಟಕದಲ್ಲಿ ಕುಣಿಯೊ ನನ್ನನ್ನ ಯಾವ ಹುಡುಗಿ ಒಪ್ಪಿಕೊಳ್ಳುತಾಳೆ. ನಾನೋ, ನಾಟಕ ಅಂತ ವರ್ಷವಿಡೀ ಹೊರಗೇ ಇರ್ತೀನಿ. ನನ್ನ ಮದುವೆಯಾಗಿ ಒಬ್ಬೇ ಇರ್ತಾಳಾ. ನನ್ನಂಥವನಿಗೆ ಹೆಣ್ಣು ಕೊಡೋಕೆ ಯಾವ ಅಪ್ಪ ಅಮ್ಮ ಇಷ್ಟಪಡ್ತಾರೆ? ನಾನು ಮೊದಲೇ ನಾಟಕದವನು, ಅದರಲ್ಲೂ ಹೆಣ್ಣು ಪಾತ್ರ ಮಾಡೋನು, ನನಗೆ ನಿಜವಾಗಲೂ ಹೆಣ್ಣು ಸಿಗುತ್ತಾ?' ಎಂದು ಅಪ್ಪನ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತಿದ್ದ. ಆದರೆ ದೇವಣ್ಣ ಅವನ ಅಪ್ಪ, ಅವನಿಗೆ ಗೊತ್ತಿಲ್ಲವೇ ಮಗನನ್ನು ಹೇಗೆ ಒಪ್ಪಿಸಬೇಕೆಂದು. ಹಿಡಿದ ಪಟ್ಟು ಬಿಡದೆ 'ಹೆಣ್ಣು ಹುಡುಕುವ ಜವಾಬ್ದಾರಿ ನಂದು, ನಿಂಗೇನು ಕಡ್ಮೆ ಆಗೈತೆ, ನೀಯೇನು ಸಾಯಗಂಟ ನಾಟಕ ಕುಣೀತಿರ್ತೀಯಾ, ಇನ್ನಾಲ್ಕೈದು ವರ್ಷ ಕುಣಿಬೋದು, ಆಮೇಕೆ ನಿಂಗೆ ಯಾರು ಕರೀತಾರೆ, ಅಷ್ಟ್ರೊಳ್ಗೆ ನಿಂದು ಅಂತ ಒಂದು ಸಂಸಾರ ಆಗಿದ್ದರೆ ನಿಂಗೆ ಒಳ್ಳೆದಲ್ವಾ. ನಿಂಗನಳ್ಳೀಲಿ ಒಂದು ಹೆಣ್ಣು ಐತಂತೆ. ಅವರು ಒಪ್ಕಂಡಿದಾರೆ, ನೀನು ಓಗಿ ನೋಡೋದು ಅಷ್ಟೆ. ಆಷಾಢ ಕಳದ ಮ್ಯಾಲೆ ಒಂದಪ ಹೋಗಿ ನೋಡ್ಕಂಡು ಬರಾನ. ನೀನು ಒಪ್ಕಂಡರೆ ಶ್ರಾವಣದಲ್ಲೇ ಮದ್ವೆ. ನೀನು ನಿನ್ ಪಾಡಿಗೆ ನಾಟಕ ಮಾಡ್ಕೊಂಡು ಇರು. ನಿಂಗೆ ಯಾವಾಗ ಆಗುತ್ತೊ ಆವಾಗ ಬಂದು ಹೋಗ್ತಾ ಇರು. ಹುಡುಗಿ ಜೊತೆಗೆ ಅವರಜ್ಜೀನೂ ಬರುತ್ತಂತೆ. ನಾನೂ ಇರ್ತೀನಿ. ಇನ್ನೇನಾಗಬೇಕು. ಅದಕ್ಕೆಲ್ಲ ಅವ್ರು ಒಪ್ಕಂಡಿದಾರೆ. ಇನ್ನೇನು ಆಗ ಬೇಕು ಏಳು' ಅಂದಾಗ ಗಜಾನನನಿಗೆ ಏನೂ ಹೇಳಲು ಉಳಿದಿರಲಿಲ್ಲ. ಮುಂದೆ ಮಾತನಾಡಲು ಸಾಧ್ಯವಾಗದೆ ಸುಮ್ಮನಾಗಿಬಿಟ್ಟ. ಮಗನ ಮೌನ ಕಂಡು ಒಪ್ಪಿಕೊಂಡಿದ್ದಾನೆಂದು ತಿಳಿದು ಹಿಗ್ಗಿದ.

ಹೆಣ್ಣುಮಕ್ಕಳಿಗೆ ಫೋನ್ ಮಾಡಿದ ದೇವಣ್ಣ ಗಜಾನನ ಮದುವೆಗೆ ಒಪ್ಪಿಕೊಂಡಿದ್ದಾನೆಂದು ಖುಷಿಯಿಂದ ತಿಳಿಸಿ, 'ಆಷಾಢ ಕಳೆದ ಕೂಡಲೆ ನೀವೆಲ್ಲರೂ ಬಂದು ಬುಡಿ, ಹುಡುಗಿ ನೋಡೊ ಶಾಸ್ತ್ರ ಮುಗಿಸಿ ಬಿಟ್ಟು ಶ್ರಾವಣಕ್ಕೆ ಮದ್ವೆ ಇಟ್ಕೊಳ್ಳೋಣ' ಅಂತ ತಿಳಿಸಿದ. ಅವರಿಗೂ ಈ ಸಿಹಿಸುದ್ದಿ ಕೇಳಿ ಸಂತೋಷವಾಗಿತ್ತು. ಹೆಂಗೋ ನಾಲ್ಕು ಜನದಂಗೆ ತಮ್ಮ ಮದುವೆಯಾಗಿ ಸಂಸಾರಸ್ಥನಾದರೆ ಸಾಕು, ತೌರಿನ ಬಳ್ಳಿ ಚಿಗುರಿ ಹೂವರಳಿಸಿ ನಳನಳಿಸಿದರೆ ಅದಕಿಂತ ಮತ್ತೇನು ಬೇಕು ಅನ್ನುವ ಸಂತೋಷದಲಿ, ಆಷಾಢ ಕಳೆಯುವುದನ್ನೇ ಕಾದಿದ್ದು, ಶ್ರಾವಣ ಹುಟ್ಟಿದೊಡನೆ ತೌರಿಗೆ ಓಡಿ ಬಂದಿದ್ದರು. ತಮ್ಮನಿಗೆ ಹೆಣ್ಣು ನೋಡುವುದರ ಸಂಭ್ರಮ ಅವರಲ್ಲಿ ತುಂಬಿ ತುಳುಕುತ್ತಿತ್ತು. ತಮ್ಮನನ್ನು ಕಿಚಾಯಿಸಿ ರೇಗಿಸಿ ಗೋಳುಹೊಯ್ದುಕೊಂಡರು. ತಮ್ಮೆಲ್ಲ ಹುಡುಗಾಟಿಕೆಗೆ ತಮ್ಮನ ನೀರಸ ಪ್ರತಿಕ್ರಿಯೆ ಅವರ ಸಂತೋಷ–ಸಂಭ್ರಮದಲ್ಲಿ ಕಾಣಲೇ ಇಲ್ಲ. ಆವತ್ತು ಹುಡುಗಿಯನ್ನು ನೋಡಿ ಮಾತುಕತೆ ಮುಗಿಸಿಕೊಂಡೇ ಬಂದರು. ಅವರೊಮ್ಮೆ ಬಂದು ಹೋಗಿ ಮಾಡಿದರೆ ಮದುವೆ ದಿನ ನಿಶ್ಚಯ ಮಾಡಿ ನಿಶ್ಚಿತಾರ್ಥ ಮುಗಿಸಿಕೊಂಡು ಹೋಗುವುದು, ಮತ್ತೆ ಮದುವೆ ಹೊತ್ತಿಗೆ ಬರುವುದಾಗಿ ಅಪ್ಪನಲ್ಲಿ ಹೇಳುತ್ತಾ ಮದುವೆಗೆ ಯಾವ ತಿಂಗಳು ಅನುಕೂಲವಾಗಬಹುದು ಅಂತ ಅವತ್ತೆಲ್ಲ ಲೆಕ್ಕಾಚಾರ ಹಾಕುತ್ತಲೇ ಇರುಳು ಕಳೆದರು. ಬೆಳಗ್ಗೆ ಎದ್ದು ನೋಡಿದರೆ ಗಜಾನನ ಆಗಲೇ ಎದ್ದು ಹೊರಹೋಗಿದ್ದ.

'ಅಪ್ಪಯ್ಯ, ಗಜಾನನ ಇವತ್ತೂ ನಾಟಕ ಆಡೋಕೆ ಹೋಯ್ತನಾ, ಮದ್ವೆ ಆದ ಮ್ಯಾಕೆ ಇಂಗೆ ಹೋಯ್ತ ಇದ್ರೆ ಎಂಗೆ ಅಪ್ಪಯ್ಯ, ನಾಟಕ ಪಾಟಕ ಬುಟ್ಟು ಇಲ್ಲೆ ವಲ ಗದ್ದೆ ನೋಡ್ಕೊಂಡು ಇರೋಕೆ ಏಳು. ಜೊತ್ಗೆ ಒಂದಂಗಡಿನೂ ಇಟ್ಟಕಂಡ್ರೆ ಆತು. ನಾಟ್ಕ ಕುಣಿಯಕಂತೂ ಬ್ಯಾಡಾ, ಅದ್ರಲ್ಲೂ ಆ ಎಣ್ಣು ಯೇಷಾ ಅಂತೂ ಬ್ಯಾಡಾ ಕಣಪ್ಪ' ಎಂದು ಅಪ್ಪಯ್ಯಂಗೆ ಮನಸ್ಸಿಗೆ ನಾಟಂಗೆ ಹೇಳ್ತಾನೇ ಇದ್ರು ಹೆಣ್ಣುಮಕ್ಕಳು. ಹೊರಗಡೆ ಯಾರೋ ದೇವಣ್ಣ, ದೇವಣ್ಣ ಅಂತ ಕೂಗೋದನ್ನ ಕೇಳಿ ದೇವಣ್ಣ ಹೊರಕ್ಕೆ ಬಂದ. ಬಂದವರು ಗಾಬರಿಯಿಂದ 'ದೇವಣ್ಣ ನಿಮ್ಮ ಗಜಾನನ ಹೊಲದಾಗಿರೊ ಮರಕ್ಕೆ ನೇಣು ಹಾಕ್ಕಂಡವ್ನೆ' ಅಂತ ಹೇಳಿದಾಗ, 'ಅಯ್ಯೋ ಸಿವನೇ, ಏನಾಗಿತ್ತೊ ನಿನಗೆ?' ಅಂತ ಬಾಯಿ ಬಡಿದುಕೊಳ್ಳುತ್ತಾ ಹೊಲದ ಕಡೆ ಓಡಿದ.